<u>**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**</u>

<u>**ಹಿರೇಕೆರೂರು.**</u>

<u>**ಸಿ.ಸಿ.ನಂಬರ್ಃ 437/2024**</u>

ಸಿಡಬ್ಲ್ಯೂಃ 9

ಪಿಡಬ್ಲ್ಯೂಃ 4

| | | |
|---|---|---|
| ಸಾಕ್ಷಿಯ ಹೆಸರು | : | ರಹಮತವುಲ್ಲಾ |
| ತಂದೆಯ ಹೆಸರು | : | ಹಬೀಬಸಾಬ ಮಕಂದಾರ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಕಬ್ಬಿಣ ಕಟ್ಟುವುದು |
| ವಾಸಸ್ಥಳ | : | ರಾಣೇಬೆನ್ನೂರು |

ಇಂದು ದಿನಾಂಕಃ 11.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ಮೃತ ವ್ಯಕ್ತಿ ನನ್ನ ಹೆಂಡತಿ. ಚಾಸಾ–1 ನನ್ನ ಚಿಕ್ಕಪ್ಪ. ಚಾಸಾ–8 ನನ್ನ ಅಳಿಯ. ಆರೋಪಿಯ ಪರಿಚರ ನನಗೆ ಇರತ್ತದೆ. ಅಪಘಾತವನ್ನು ನಾನು ನೋಡಿರುವುದಿಲ್ಲ ಹಾಗೂ ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>**ಪಾಟೀ ಸವಾಲುಃ**</u> ಮಾನ್ಯ ಎಪಿಪಿಯವರಿಂದಃ

ದಿನಾಂಕ 26–07–2023 ರಂದು ಮದ್ಯಾಹ್ನ 12.30 ಸುಮಾರಿಗೆ ನಾನು ರಾಣೇಬೆನ್ನೂರಿನಲ್ಲಿ ಇರುವಾಗ ನನ್ನ ಸಂಬಂದಿಕರು ನನ್ನಗೆ ಕರೆ ಮಾಡಿ ನನ್ನ ಹೆಂಡತಿಗೆ ಅಪಘಾತವಾಗಿರುವ ವಿಚಾರವನ್ನು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ನಾನು ಮೋಟಾರ ಸೈಕಲ್ ನಲ್ಲಿ ಹಾವೇರಿ ಸರಕಾರಿ ಆಸ್ಪತೆಗೆ ಹೋಗಿರುತ್ತಾರೆ ಎಂದರೆ ಸರಿ. ಆಗ ಅಪಘಾತದ ಬಗ್ಗೆ ವಿಚಾರಣೆ ಮಾಡಿದಾಗ ಚಾಸಾ–1 ರವರು ಆರೋಪಿ ಮೋಟಾರ ಸೈಕಲ್ ನಲ್ಲಿ ಮೃತ ಮಹಿಳೆಯನ್ನು ಕೂರಿಸಿಕೊಂಡು ಹಂಸಬಾವಿ ಗ್ರಾಮದ ಬಳಗಾನೂರ ಚಾಳದ ಕಡೆಯಿಂದ ಬರುತ್ತಿರುವಾಗ, ಪುಟ್ ಪಾತ್ ನ ಬಳಿ ಅಜಾಗರೂಕತೆಯಿಂದ ಸ್ಕಿಡ್ ಮಾಡಿದ್ದು, ಆಗ ಬೈಕ

ಆರೋಪಿ ಹಾಗೂ ಮೃತ ಮಹಿಳೆ ಪುಟ್ ಪಾತ್ ಮೇಲೆ ಬಿದಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅ ಪರಿಣಾಮ ಮೃತ ಮಹಿಳೆಗೆ ತಲೆಗೆ ತೀವ್ರ ಗಾಯಗೊಂಡಿದ್ದು, ಎಂದು ತಿಳಿಸಿರುತಾತರೆ ಎಂದರೆ ಸರಿಯಲ್ಲ. ನಂತರ ಆಕೆಯನ್ನು ಚಾಸಾ-1 ರವರು ಉಪಚರಿಸಿ ನೋಡಲಾಗಿ, ತಲೆಗೆ ಹೊಡೆತ ಬಿದ್ದು ಪ್ರಜ್ಞೆ ತಪ್ಪಿತ್ತು ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆಕೆಯನ್ನು ಹಂಸಬಾವಿ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಹಾವೇರಿ ಆಸ್ಪತ್ರೆಗೆ ಕಳುಹಿಸಿಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಹುಬ್ಬಳ್ಳಿ ಸಂಜೀವಿನಿ ಆಸ್ಪತ್ರೆಗೆ ಕಳುಹಿಸಿಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಆಕೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 31-07-2023 ರಂದು ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿನಾಂಕ 31-07-2023 ರಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಪಟ್ಟ ಕಾರಣ ಮೃತ ವಕ್ತಿಯ ಪಂಚನಾಮೆಗೆ ನಾನು ಸಹಕರಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಬಿ ಎನ್ ಬಿ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.